# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1369** |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22-08-2025 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಾನ್ಯ ಪ್ರಧಾನ ಮಂತ್ರಿ ಯವರ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಉತ್ತರ ಕರ್ನಾಟಕದ ಪ್ರಮುಖ ಆಹಾರ ಕಲಬುರಗಿಯ ರೊಟ್ಟಿಯ ಬಗ್ಗೆ ಪ್ರಸ್ತಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ದೇಶದಲ್ಲಿ ಕಲಬುರಗಿ ರೊಟ್ಟಿಯು ಪ್ರಸಿದ್ಧಿ ಪಡೆದಿದ್ದು ದೇಶ ವಿದೇಶಗಳಲ್ಲೂ ಬೇಡಿಕೆ ಹೆಚ್ಚಾಗುತ್ತಿದ್ದು, ಆ ಭಾಗದ ಮಹಿಳೆಯರು ಸ್ವಾವಲಂಬನೆಯಿಂದ ಬದುಕು ಕಟ್ಟಿಕೊಳ್ಳುತ್ತಿರುವುದರಿಂದ ರೊಟ್ಟಿ ಉದ್ಯಮವನ್ನು ಇನ್ನಷ್ಟು ಉತ್ತೇಜಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಮಾನ್ಯ ಪ್ರಧಾನ ಮಂತ್ರಿ ಯವರ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಉತ್ತರ ಕರ್ನಾಟಕದ ಪ್ರಮುಖ ಆಹಾರ ಕಲಬುರಗಿಯ ರೊಟ್ಟಿಯ ಬಗ್ಗೆ ಪ್ರಸ್ತಾಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಪ್ರಧಾನ ಮಂತ್ರಿಗಳ ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆ (PMFME) ಅಡಿಯಲ್ಲಿ ರೊಟ್ಟಿ ಉದ್ಯಮವನ್ನು ಉತ್ತೇಜಿಸಲಾಗುತ್ತಿದೆ. ಈ ಯೋಜನೆಯಡಿಯಲ್ಲಿ ರೊಟ್ಟಿ ಉದ್ಯಮವನ್ನು ಸ್ಥಾಪಿಸಲು ಉದ್ದಿಮೆದಾರರು ಶೇಕಡ 50% ರಷ್ಟು ಸಾಲ ಸಂಪರ್ಕಿತ ಸಹಾಯಧನ, ಗರಿಷ್ಟ ರೂ.15.00 ಲಕ್ಷ ಸಹಾಯಧನ ಪಡೆಯಬಹುದಾಗಿರುತ್ತದೆ. ಈ ಅವಕಾಶ ಬಳಸಿಕೊಂಡು ಉದ್ದಿಮೆಯನ್ನು ಸ್ಥಾಪಿಸಲು ಜಿಲ್ಲಾಮಟ್ಟದ ಅರಿವು ಮೂಡಿಸುವ ಕಾರ್ಯಕ್ರಮ, ದಿನ ಪತ್ರಿಕೆ ಹಾಗೂ ಸುದ್ದಿ ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ನೀಡಲಾಗುತ್ತಿದೆ. |
| ಆ) | ಕಲಬುರಗಿ ರೊಟ್ಟಿಗೆ "ಭೌಗೋಳಿಕ ಮಾನ್ಯತೆ" (GI Tag – Geographical Indication) ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಆ ಭಾಗದಿಂದ ಯಾವುದಾದರೂ ಮನವಿಗಳು ಬಂದಿವೆಯೇ; ಮನವಿ ಬಂದಿದ್ದಲ್ಲಿ, ಆ ಮನವಿ ಪತ್ರಗಳ ಪ್ರತಿಯನ್ನು ನೀಡುವುದು; | ಕಲಬುರಗಿ ರೊಟ್ಟಿಗೆ "ಭೌಗೋಳಿಕ ಮಾನ್ಯತೆ" (GI Tag-Geographical Indication) ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಆ ಭಾಗದಿಂದ ಮನವಿ ಪತ್ರ ಸ್ವೀಕೃತವಾಗಿರುತ್ತದೆ, ಮನವಿಯ ಪ್ರತಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಇ) | ಆ ಭಾಗದ ಬೇಡಿಕೆಯಂತೆ GI ಮಾನ್ಯತೆ ಕುರಿತು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿಯನ್ನು ಒದಗಿಸುವುದು) | ಮನವಿಯ ಕುರಿತು ಪರಿಶೀಲಿಸಿ, ವಿಸ್ತೃತ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೃಷಿ ಇಲಾಖೆಯ ಅಧೀನದ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (KAPPEC) ಸಂಸ್ಥೆಯನ್ನು ಕೋರಲಾಗಿದ್ದು, ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ. |

*ಕೃಇ 163 ಎಎಂಎಸ್ 2025*

**(ಎನ್.ಚಲುವರಾಯಸ್ವಾಮಿ)**
ಕೃಷಿ ಸಚಿವರು

ಅನುಬಂಧ

ದಿನಾಂಕ; 01/07/2025

**ಇವರಿಗೆ,**
ಮಾನ್ಯ ಕೃಷಿ ಸಚಿವರು,
ಕರ್ನಾಟಕ ಸರ್ಕಾರ,
ವಿಕಾಸಸೌಧ, ಬೆಂಗಳೂರು.

**ಮಾನ್ಯರೇ,**

**ವಿಷಯ :- ಕಲಬುರಗಿ ರೊಟ್ಟಿಗೆ "ಭೌಗೋಳಿಕ ಸೂಚನಾ" (GI- Geographical Indication) ಮಾನ್ಯತೆ ನೀಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಕುರಿತು.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಳೆದ ಭಾನುವಾರ ಪ್ರಧಾನಿ ನರೇಂದ್ರ ಮೋದಿಯವರು ತಮ್ಮ 123ನೇ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಈ ಬಾರಿ ಉತ್ತರ ಕರ್ನಾಟಕ ಪ್ರಸಿದ್ಧ ಆಹಾರವಾದ ಜೋಳದ ರೊಟ್ಟಿಯನ್ನು ಕಲಬುರಗಿ ಜಿಲ್ಲೆಯ ನಗರ ಹಾಗೂ ಗ್ರಾಮೀಣ ಭಾಗದ ಮಹಿಳೆಯರು ತಮ್ಮ ವೃತ್ತಿಯಲ್ಲಿ ಅಳವಡಿಸಿಕೊಂಡು ಸ್ವಾವಲಂಬಿ ಬದುಕು ನಡೆಸುವಲ್ಲಿ ಹೊಸ ದಿಕ್ಕು ಕಂಡುಕೊಂಡು ಸಮಾಜಕ್ಕೆ ಪ್ರೇರಣೆಯಾಗಿದ್ದನ್ನು ಗುರುತಿಸಿ, ಕಲಬುರಗಿ ರೊಟ್ಟಿಯ ಬಗ್ಗೆ ಪ್ರಶಂಸೆ ವ್ಯಕ್ತ ಪಡಿಸಿದ್ದರು. ಕಲಬುರಗಿ ರೊಟ್ಟಿ ಕುರಿತು ಪ್ರಧಾನಿಯವರ ಗಮನಕ್ಕೆ ತರುವಲ್ಲಿ ಕಲಬುರಗಿ ಜಿಲ್ಲಾಡಳಿತ ಮತ್ತು ಕೃಷಿ ಇಲಾಖೆಯ ಅಧಿಕಾರಿಗಳ ಅವಿರತ ಪರಿಶ್ರಮದ ಫಲವಾಗಿ ಇದು ಸಾಧ್ಯವಾಗಿದ್ದು, ಅಲ್ಲಿನ ರೊಟ್ಟಿಗೆ ದೇಶದಾದ್ಯಂತ ಈಗ ಬಹು ಬೇಡಿಕೆ ಬರುತ್ತಿದೆ. ಈಗಾಗಲೇ ಬೆಂಗಳೂರಿನ ಆದಾಯ ಇಲಾಖೆ ಕಚೇರಿಯ ಆವರಣದಲ್ಲಿ ರೊಟ್ಟಿ ಮಳಿಗೆಯನ್ನು ತೆರೆಯಲು ಅಲ್ಲಿನ ಅಧಿಕಾರಿಗಳು ಆಹ್ವಾನಿಸಿದ್ದು, ಕರ್ನಾಟಕ ಭವನ ಮತ್ತು ಹೈದ್ರಾಬಾದ್ ನಂತಹ ನಗರಗಳಲ್ಲಿ ಮಳಿಗೆ ತೆರೆಯಲು ಬಹು ಬೇಡಿಕೆ ಬರುತ್ತಿದೆ. ಅಲ್ಲದೆ, ಈ ರೊಟ್ಟಿ ಉದ್ಯಮವು ವಿದೇಶಿ ಮಾರುಕಟ್ಟೆಗೆ ಪ್ರವೇಶಿಸಲು ಶುಕ್ರ ದೆಸೆ ಆರಂಭವಾದಂತಾಗಿದೆ.

ಈಗಾಗಲೇ ಪ್ರತಿನಿತ್ಯ ಅಮೆಜಾನ್, ಝೋಮ್ಯಾಟೊ ಹಾಗೂ ಸ್ವಿಗ್ಗಿ ಸೇರಿದಂತೆ ಆನ್ಲೈನ್‌ನಲ್ಲಿ ಸುಮಾರು 25,000 ರೊಟ್ಟಿ ಬೇಡಿಕೆ ಇದೆ. ಈ ರೊಟ್ಟಿ ಆಹಾರೋತ್ಪನ್ನಕ್ಕೆ **"ಭೌಗೋಳಿಕ ಸೂಚನಾ"** ಮಾನ್ಯತೆ ದೊರಕುವುದರಿಂದ ಜಾಗತಿಕ ಮನ್ನಣೆ ಸಿಗುವುದರ ಜೊತೆಗೆ ಇಲ್ಲಿನ ಉದ್ಯಮಕ್ಕೆ ಇನ್ನಷ್ಟು ಉತ್ತೇಜನ ಸಿಕ್ಕಂತಾಗುತ್ತದೆ.

ಆದ್ದರಿಂದ, ಕಲಬುರಗಿ ರೊಟ್ಟಿ ಉದ್ಯಮವನ್ನು ಇನ್ನಷ್ಟು ಉತ್ತೇಜನ ನೀಡಲು ಈ ಆಹಾರೋತ್ಪನ್ನಕ್ಕೆ **"ಭೌಗೋಳಿಕ ಸೂಚನಾ" ('GI')** ಮಾನ್ಯತೆ ನೀಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪವನ್ನು ಸಲ್ಲಿಸುವಂತೆ ಈ ಮೂಲಕ ಮನವಿ ಮಾಡಬೇಕೆಂದು ತಮ್ಮಲ್ಲಿ ಕೋರುತ್ತೇನೆ.

**ವಂದನೆಗಳೊಂದಿಗೆ,**

ದಿನಾಂಕ 1/7/25

**ತಮ್ಮ ವಿಧೇಯ,**

Nadageri

**(ಶಿವರಾಜ್ ನಡಗೇರಿ)**
ಕರಜಗಿ ಗ್ರಾಮ,
ಅಫಜಲಪುರ ತಾಲ್ಲೂಕು,
ಕಲಬುರಗಿ ಜಿಲ್ಲೆ 585217.
**(ಮೊ. ನಂ.-9108388693)**